**ದಿನಾಂಕ 11.08.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ SSP ವಕೀಲರಿಂದ**

ನಾನು ಬೆಂಗಳೂರಿನಲ್ಲಿ ಕಳೆದ 5 ವರ್ಷಗಳಿಂದ ವಾಸವಿದ್ದೇನೆ. ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಗೊತ್ತು. ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ನನ್ನ ವಾಸ ಸ್ಥಳ ಹೆರೂರು ಗ್ರಾಮ ಎಂದು ಬರೆಸಿರುತ್ತೇನೆ. ನನ್ನ ತಾತ ಬಸವರಾಜಪ್ಪ ದೇಸಾಯಿ ಇವರಿಗೆ ಅಂದಾಜು 62 ರಿಂದ 70 ಎಕರೆ ಜಮೀನು ಇತ್ತು. ಸದರಿ ಜಮೀನುಗಳು ಈಗ ಯಾರ ಯಾರ ಹೆಸರಿನಲ್ಲಿ ಇರುತ್ತವೆ ಎಂದು ಹೇಳಲು ಬರುತ್ತದೆ.

ಸ.ನಂ.47 ರಲ್ಲಿ 8 ಎಕರೆ 34 ಗುಂಟೆ ನನ್ನ ಮತ್ತು ನನ್ನ ತಾಯಿ ಸರೋಜ ಇವರ ಹೆಸರಿನಲ್ಲಿ, 9 ಎಕರೆ ಪರ್ವತರೆಡ್ಡಿ ಹೆಸರಿನಲ್ಲಿ ಇದ್ದು ಸದರಿ 9 ಎಕರೆಯಲ್ಲಿ ಕೆನಾಲಗೆ ಸ್ವಾಧಿನ ಪಡಿಸಿಕೊಂಡು 7 ಎಕರೆ 36 ಗುಂಟೆ ಇರುತ್ತದೆ.

ಸ.ನಂ.54 ರಲ್ಲಿ 6 ಎಕರೆ 38 ಗುಂಟೆ ನನ್ನ ಮತ್ತು ನನ್ನ ತಾಯಿ ಸರೋಜ ಇವರ ಹೆಸರಿನಲ್ಲಿ, 6 ಎಕರೆ 38 ಗುಂಟೆ ಪರ್ವತರೆಡ್ಡಿ ಹೆಸರಿನಲ್ಲಿ ಇರುತ್ತದೆ.

ಸ.ನಂ.48/*/1 ರಲ್ಲಿ 2 ಎಕರೆ ಚಿಲ್ಲರೆ ಗುಂಟೆ ಸಿದ್ದಲಿಂಗಪ್ಪನ ಮಕ್ಕಳು ಚನ್ನಪ್ಪ, ರುದ್ರಪ್ಪ ಮತ್ತು ಸೂಗೂರೇಶ ಇವರ ಹೆಸರಿನಲ್ಲಿ ಇರುತ್ತದೆ.

ಸ.ನಂ.48/*/1 ಎ ರಲ್ಲಿ 3 ಎಕರೆ ಲಿಂಗಪ್ಪನ ಮಕ್ಕಳಾದ ಚಂದ್ರಶೇಖರ, ವಿಶ್ವನಾಥ ಮತ್ತು ಸೂಗೂರೇಶ ಇವರ ಹೆಸರಿನಲ್ಲಿ ಇರುತ್ತದೆ.

ಸ.ನಂ.51 ರಲ್ಲಿ ಅಂದಾಜು 6 ಎಕರೆ ಸಿದ್ದಲಿಂಗಪ್ಪನ ಮಕ್ಕಳು ಚನ್ನಪ್ಪ, ರುದ್ರಪ್ಪ ಮತ್ತು ಸೂಗೂರೇಶ ಮತ್ತು ಲಿಂಗಪ್ಪನ ಮಕ್ಕಳಾದ ಚಂದ್ರಶೇಖರ, ವಿಶ್ವನಾಥ ಮತ್ತು ಸೂಗೂರೇಶ ಇವರುಗಳ ಹೆಸರಿನಲ್ಲಿ ಇರುತ್ತದೆ.

ಸ.ನಂ.52 ರಲ್ಲಿ ಅಂದಾಜು 6 ಎಕರೆ ಸಿದ್ದಲಿಂಗಪ್ಪನ ಮಕ್ಕಳು ಚನ್ನಪ್ಪ, ರುದ್ರಪ್ಪ ಮತ್ತು ಸೂಗೂರೇಶ ಮತ್ತು ಲಿಂಗಪ್ಪನ ಮಕ್ಕಳಾದ ಚಂದ್ರಶೇಖರ, ವಿಶ್ವನಾಥ ಮತ್ತು ಸೂಗೂರೇಶ ಇವರುಗಳ ಹೆಸರಿನಲ್ಲಿ ಇರುತ್ತದೆ ಮತ್ತು ಇನ್ನೂ 29 ಗುಂಟೆ ಮೃತ ಬಸವರಾಜಪ್ಪನ ಇವರ ಹೆಸರಿನಲ್ಲಿ ಇರುತ್ತದೆ.

ಸ.ನಂ.149/ಪಿ2 ರಲ್ಲಿ ಅಂದಾಜು 8 ಎಕರೆ ಚಿಲ್ಲರೆ ಲಿಂಗಪ್ಪನ ಮಕ್ಕಳಾದ ಚಂದ್ರಶೇಖರ, ವಿಶ್ವನಾಥ ಮತ್ತು ಸೂಗೂರೇಶ ಇವರುಗಳ ಹೆಸರಿನಲ್ಲಿ ಇರುತ್ತದೆ ಮತ್ತು 4 ಎಕರೆ ಚಿಲ್ಲರೆ ಸಿದ್ದಲಿಂಗಪ್ಪನ ಮಕ್ಕಳು ಚನ್ನಪ್ಪ, ರುದ್ರಪ್ಪ ಮತ್ತು ಸೂಗೂರೇಶ ಇವರುಗಳ ಹೆಸರಿನಲ್ಲಿ ಇರುತ್ತದೆ ಮತ್ತು 4 ಎಕರೆ ಚಿಲ್ಲರೆ ಸಿದ್ದಲಿಂಗಪ್ಪನ ಮಕ್ಕಳು

ಚನ್ನಪ್ಪ, ರುದ್ರಪ್ಪ ಮತ್ತು ಸೂಗೂರೇಶ ಇವರುಗಳ ಹೆಸರಿನಲ್ಲಿ ಇರುತ್ತದೆ ಹಾಗೂ 2 ಗುಂಟೆ ಪರ್ವತರೆಡ್ಡಿ ಹೆಸರಿನಲ್ಲಿ ಇರುತ್ತದೆ.

ಸ.ನಂ.43 ರಲ್ಲಿ 9 ಎಕರೆ ಚಿಲ್ಲರೆ ಗುಂಟೆ ಪರ್ವತರೆಡ್ಡಿ ಹೆಸರಿನಲ್ಲಿ ಇದ್ದು ಸದರಿ ಜಮೀನನ್ನು ನಮ್ಮ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿದೆ.

ಈಗ ಸ.ನಂ.43 ಪಹಣಿಯಲ್ಲಿ 9 ಎಕರೆ ಪರ್ವತರೆಡ್ಡಿ ಹೆಸರಿನಲ್ಲಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನುಗಳು ಲಿಂಗಪ್ಪ ಮತ್ತು ಆತನ ಮಕ್ಕಳಿಗೆ ಮತ್ತು ಸಿದ್ದಲಿಂಗಪ್ಪ ಹಾಗೂ ಆತನ ಮಕ್ಕಳಿಗೆ ಯಾವ ವರ್ಷ ಮುಟೇಶನ ಆಗಿರುತ್ತದೆ ಎಂದು ನನಗೆ ಹೇಳಲು ನೆನಪಿರುವುದಿಲ್ಲ. ಸದರಿ ಸಿದ್ದಲಿಂಗಪ್ಪ ಮತ್ತು ಲಿಂಗಪ್ಪ ಇವರ ಹೆಸರಿಗೆ ಮುಟೇಶನ ಆಗುವ ಪೂರ್ವದಲ್ಲಿ ಕುಟುಂಬದ ಪೂರ್ವಜರ ಹೆಸರಿಗೆ ಇದ್ದವು. ಮುಟೇಶನ ಯಾವ ಆಧಾರದ ಮೇಲೆ ಆಗಿರುತ್ತವೆ ಗೊತ್ತಿಲ್ಲ.

ಸ.ನಂ.48/1, 48/ಎ, 51, 52, 149/ಪಿ2 ಮತ್ತು 149 ಇವುಗಳನ್ನು ಬಸವರಾಜಪ್ಪ ತನ್ನ 2 ನೇ ಹೆಂಡತಿ ಮಕ್ಕಳಾದ ಸಿದ್ದನಗೌಡ ಮತ್ತು ಲಿಂಗಣ್ಣ ಇವರಿಗೆ ವಿಭಾಗದ ಮೂಲಕ ನೀಡಿರುತ್ತಾರೆ ಎಂದರೆ ಸರಿಯಲ್ಲ. ಆ ಕುರಿತು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಸವರಾಜಪ್ಪನ ಮೊದಲನೇ ಹೆಂಡತಿ ಮಗಳಾದ ಚನ್ನಬಸ್ಸಮ್ಮ ಇವರ 6 ಜನ ಮಕ್ಕಳ ಮದುವೆಯನ್ನು ಯಾರು ಮಾಡಿರುತ್ತಾರೆ ನನಗೆ ಹೇಳಲು ಬರುವುದಿಲ್ಲ. ಸದರಿ 6 ಜನರ ಮೊಮ್ಮಕ್ಕಳ ಮದುವೆ ಖರ್ಚು ವೆಚ್ಚವನ್ನು ನನ್ನ ತಾತ ಬಸವರಾಜಪ್ಪ ಬರಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರ ಮದುವೆ ಸಮಯದಲ್ಲಿ ಬಂಗಾರ ಮತ್ತು ಹಣವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸ.ನಂ.47 ರಲ್ಲ 8 ಎಕರೆ 36 ಗುಂಟೆ ಮೊದಲು ನನ್ನ ತಾತನ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸದರಿ ಪರ್ವತರೆಡ್ಡಿ ಹೆಸರಿಗೆ ಆಗಿರುವ 8 ಎಕರೆ 36 ಗುಂಟೆ ಜಮೀನು ಸಹ ನನ್ನ ತಾತನ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸ.ನಂ.47 ಮತ್ತು 54 ನಮ್ಮ ತಾತನಿಂದ ನಮ್ಮ ತಂದೆ ಹೆಸರಿಗೆ ಯಾವ ಆಧಾರದ ಮೇಲೆ ಮಟೇಶನ ಆಗಿರುತ್ತದ ನನಗೆ ಗೊತ್ತಿಲ್ಲ. ಸದರಿ ಸ.ನ.47 ಮತ್ತು 54 ನ್ನು ನನ್ನ ತಾತನವರು ನನ್ನ ತಂದೆ ಮತ್ತು ಪರ್ವತರೆಡ್ಡಿ ಇವರಿಗೆ ವಿಭಾಗದ ಮೂಲಕ ನೀಡಿರುತ್ತಾರೆ ಎಂದರೆ ಸರಿಯಲ್ಲ.

ಬಸವರಾಜಪ್ಪನ 3 ನೇ ಹೆಂಡತಿ ಬಸ್ಸಮ್ಮಳಿಗೆ 5 ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಇರುತ್ತರೆ. 1993 ರಲ್ಲಿ ನನ್ನ ತಾತ ತನ್ನ 2 ನೇ ಹೆಂಡತಿ ಮತ್ತು 3 ನೇ ಹೆಂಡತಿ ಮಕ್ಕಳ ನಡುವೆ ಕುಟುಂಬದ ಸ್ವತ್ತುಗಳಲ್ಲಿ ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಪರ್ವತರೆಡ್ಡಿ ಹೆಣ್ಣ ಮ್ಕಳಿಗೆ ತಿಳಿಯದಂತೆ ತಮ್ಮ ಹೆಸರಿಗೆ ಮುಟೇಶನ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಮ್ಮ ಕುಟುಂಬಕ್ಕೆ ಹಿರಿಯರಿಂದ ಬಂದ 2 ಮನೆಗಳು ಇರುತ್ತವೆ. ಸದರಿ 2 ಮನೆಗಳಲ್ಲಿ ಒಂದು ಮನೆ ಬಿದ್ದಿರುತ್ತದೆ ಇನ್ನೊಂದುರ್ಧ ಬಿದ್ದಿದ್ದು ಉಳಿದ ಭಾಗದಲ್ಲಿ

ಪರ್ವತರೆಡ್ಡಿ ವಾಸಸುತಾರೆ ಎಂದಲು ನುಡಿಯುತ್ತಾರೆ. ಸದರಿ ಮನೆಗಳು ನಂ. ಹೇಳಲು ಬರುವುದಿಲ್ಲ. ನಮ್ಮ ಕುಟುಂಬಕ್ಕೆ ಪಿತ್ರಾಜಿತವಾದ 4 ಮನೆಗಳು ಇದ್ದು ಅವುಗಳೆಲ್ಲವು ಬಿದ್ದಿರುತ್ತವೆ ಎಂದರೆ 2 ಮನೆಗಳ ಕುರಿತು ಗೊತ್ತಿದ್ದು ಇನ್ನೂಳಿದ ಮನೆಗಳು ಕುರಿತು ನನಗೆ ಮಾಹಿತಿ ಇಲ್ಲ. 1993 ವಿಭಾಗದಲ್ಲಿ 4 ಮನೆಗಳ ಪೈಕಿ ಒಂದು ಮನೆಯನ್ನು ನನ್ನ ತಂದೆಗೆ, ಇನ್ನೊದು ಪರ್ವತರೆಡ್ಡಿ ಇವರಿಗೆ, ಒಂದು ಮನೆಯನ್ನು ಸಿದ್ದನಗೌಡನಿಗೆ, ಇನ್ನೊಂದು ಮನೆಯನ್ನು ಲಿಂಗಣ್ಣನಿಗ ನೀಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶವನ್ನು ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತ್ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.